ಜಾಸ್ತಿಯಾದವು. ರಾಧಾ ಮತ್ತೆ ಮತ್ತೆ ಅದನ್ನೇ ಮಾಡಿದಳು. ಮಲಗುವ ಮುಂಚೆ ಎಲ್ಲರ ಬಾಯಲ್ಲಿ ಇದೇ 'ಜಿಂಗ್ ಚಕ್ಕ... ಜಿಂಗ್ ಚಕ್ಕ...' ಆ ಕ್ಷಣದಿಂದ ಸಂತೋಷ ನಿಲಯದಲ್ಲಿನ 'ಸಿಗ್ನಲ್ ರಾಧಾ', 'ಬಾಂಡ್ ರಾಧಾ' ಆದಳು.

ಮರುದಿನವೂ ಕಾರಿನ ದರ್ಶನವಾಗಿ ಮತ್ತೆ ಐನೂರರ ಸಿಕ್ಕಿತು. ಇದ್ದ ಎಲ್ಲಾ ಸಿನಿಮಾಗಳನ್ನು ನೋಡಿದ್ದಳಾದ್ದರಿಂದ ದುಡ್ಡನ್ನು ಸುಕನ್ಯಾಳೊಂದಿಗೆ ಹಂಚಿಕೊಂಡಳು. ದಿನಗಳು ಖುಷಿಯಲ್ಲಿ ಉರುಳಿದವು. ವಾರಕ್ಕೆರಡು ಬಾರಿಯಾದರೂ ಐನೂರರ ನೋಟಿನವ ಸಿಗ್ನಲ್ಲಿನಲ್ಲಿ ಸಿಕ್ಕು ದುಡ್ಡು ಕೊಟ್ಟು ಆಶೀರ್ವಾದ ಪಡೆದು ಹೋಗುತ್ತಿದ್ದ.

## 8

ಮೂರು ವಾರಗಳು ಮನೆಯ ಹೆಸರನ್ನು 'ಯಾವಾಗಲೂ ಸಂತೋಷ ನಿಲಯ' ಎಂದು ಬದಲಾಯಿಸಬೇಕೇನೋ ಎನ್ನುವಷ್ಟು ಚೆನ್ನಾಗಿದ್ದವು. ಆದರೆ ಚಿಕನ್ನು ಮಟನ್ನು ಮಾಡಿಕೊಂಡಿದ್ದ ಭಾನುವಾರದ ರಾತ್ರಿ ಊಟಕ್ಕೆ ಕೂರುವ ಸಮಯಕ್ಕೆ ಸರಿಯಾಗಿ ಪೊಲೀಸರು ಮನೆಗೆ ನುಗ್ಗಿದರು. ಸೀದಾ ದೊಡ್ಡಕ್ಕನ ರೂಮು ಹೊಕ್ಕು ಒಳಗಿನಿಂದ ಬ್ಯಾಗೊಂದನ್ನು ಹಿಡಿದು ಹೊರ ಬಂದು ಸುತ್ತಲೂ ಒಮ್ಮೆ ನೋಡಿ ಜೀಪು ಹತ್ತಿ ಹೊರಟರು. ರೂಮಿನಿಂದ ಹೊರ ಬಂದ ದೊಡ್ಡಕ್ಕ, ಮೂಲೆಯಲ್ಲಿ ನಿಂತಿದ್ದ ನಯನಳ ಕಡೆ ನುಗ್ಗಿ ಕಪಾಳಕ್ಕೆ ಜೋರು ಬಿಗಿದಳು. 'ಏನಲೇ ಬೋಸುಡಿ, ದುಡ್ಡು ಕದ್ಕಂಬರ್ತೀಯಾ?' ಎಂದು ಮತ್ತೆ ಬಿಗಿದಳು. ಮತ್ತೆ ಇನ್ನೊಂದು ಬಿಗಿದಳು. ಒಂದೊಂದು ಹೊಡೆತಕ್ಕೂ ಹೆಚ್ಚಿನ ಅಳುವಿನಲ್ಲಿ ನಯನಳ ಗಂಟಲು ಹರಿಯಲತ್ತಿತ್ತು.

ರಾತ್ರಿಯದ್ದೇ ನೆನೆಯುತ್ತಾ ಮರುದಿನ ಸಿಗ್ನಲ್ಲಿಗೆ ಬಂದ ರಾಧಾ ಮತ್ತು ಸುಕನ್ಯಾರ ದಿನ ಮಂಕಾಗೇ ಶುರುವಾಯಿತು. ಜನ ಆಗಲೇ 'ಇವರ' ಸಿನಿಮಾ ಮರೆತಿದ್ದರು. ಮಧ್ಯಾಹ್ನದ ಮೇಲೆ ಯಾಕೋ ಬೇಜಾರು ಹೆಚ್ಚಾಯಿತು. ಎಂದಿನಂತೆ ಮರಿಯಣ್ಣನ ಹೋಟೆಲಿಗೆ ಹೋಗದೆ ಸ್ಟೇಶನ್ ರೋಡಿನ ಸರ್ಕಲ್ಲಿನಲ್ಲಿದ್ದ ಬಂಡಿಯಲ್ಲಿ ಅನ್ನ ತಿಳಿಸಾರನ್ನು ಅರ್ಧಂಬರ್ಧ ತಿಂದು ಮಿಕ್ಕಿದ್ದನ್ನು ನಾಯಿಗೆ ಹಾಕಿ ಪುಣ್ಯಕಟ್ಟಿಕೊಂಡರು.

ಇಬ್ಬರ ಕಾಲ್ಗಳು ಟಾಕೀಸಿನ ಕಡೆಗೆ ಎಳೆದವು. ಹೊಸಾ ಸಿನಿಮಾ ಬಂದು ಎರಡು ಮೂರು ದಿನಗಳಾಗಿದ್ದವು. 'ಚೆನ್ನಾಗೈತಂತೆ' ಎಂದು ಸುತ್ತಲಿನ ಜನರು ಮಾತಾಡಿದ್ದನ್ನು ಇಬ್ಬರೂ ಕೇಳಿದ್ದರು. ಹಿಂದೆಲ್ಲಾ 'ಇವನವ್ವನ... ಕನ್ನಡ ಪಿಚ್ಚರಿಗೆ ಇಂಗ್ಲಿಷ್ ಹೆಸ್ರು ಯಾಕ್ ಇಡ್ಬೇಕು? ಮುಕ್ಕಿ ಬಗ್ಗಿ ಹುಡ್ಕಿದ್ರೆ ಕನ್ನಡುದ್ ಪದ ಸಿಗಲ್ಲೇನು?' ಎಂದುಕೊಳ್ಳುತ್ತಿದ್ದ ರಾಧಾಳಿಗೆ, ಪೋಸ್ಟರ್‌ನಲ್ಲಿದ್ದ 'ರಥಾವರ' ಅನ್ನೋ ಹೆಸರನ್ನು 'ರಥ ಪ್ಲಸ್ ವರ' ಎಂದು ಬಿಡಿಸಿ ಬಿಡಿಸಿ ಓದಿ ತಳಬುಡ ತಿಳಿಯದೇ 'ಹಿಂಗಂದ್ರೆ ಏನವಾ ಅರ್ಥ?' ಎಂದು ಪೇಚಾಡುತ್ತಾ ಪಕ್ಕಕ್ಕೆ ತಿರುಗಿದಳು ಪಾಪ, ಸುಕನ್ಯಾಳ ಕನ್ನಡ ಇನ್ನೂ ಕೆಟ್ಟ ಪರಿಸ್ಥಿತಿಯಲ್ಲಿತ್ತು.

ಇನ್ನೊಂದ್ ಇಪ್ಪತ್ತೇ ಜನ ಕಡಿಮೆ ಬಿದ್ದಿದ್ದರು 'ತುಂಬಿದ ಪ್ರದರ್ಶನ'ವೆಂಬ ಬೋರ್ಡು ಹಾಕುವುದಕ್ಕೆ. ಸಿನಿಮಾ ಶುರುವಾಯಿತು. ಕೆಲವೇ ನಿಮಿಷಗಳಲ್ಲಿ ಕತೆಯ ಬಗ್ಗೆ ತಿಳಿದ ರಾಧಾ ಕಂಗಾಲಾದಳು. ಸುಕನ್ಯಾಳಿಗೆ ಗಾಬರಿಯಾಗತೊಡಗಿತು. ಸಾರಾಂಶ ಇಷ್ಟೇ, 'ರಾಜಕೀಯದಲ್ಲಿ ಅಧಿಕಾರ ಸಿಗಲು ಸತ್ತ ಮಂಗಳಮುಖಿಯ ಮುಖ ನೋಡಬೇಕು' ಎಂದು ಖಳನಿಗೆ ಹೇಳುವ ಸ್ವಾಮೀಜಿ, 'ಆ ಜನ ತಮ್ಮವರ ಶವಸಂಸ್ಕಾರವನ್ನು ಯಾರೂ ಕಾಣದಂತೆ ರಾತ್ರಿ ಊರೆಲ್ಲಾ ಮಲಗಿದ ಮೇಲೆ ಮಾಡುವರು ಮತ್ತು ತಮ್ಮವರಲ್ಲದವರು ಶವದ ಮುಖ ನೋಡಿ ದೇಹಕ್ಕಿರುವ ಅತೀಂದ್ರಿಯ ಶಕ್ತಿಯು ಪೋಲಾಗದಂತೆ ತಡೆಯಲು ತಮ್ಮ ಪ್ರಾಣವನ್ನು ಲೆಕ್ಕಿಸದೆ